ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 10th April 1969.

The House met in the Assembly Chamber, Vidhana Soudha, Bangalore, at Twelve of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Question No. 808 *Re.* Rehabilitation of Displaced Persons in Sharavathy Project.

ಶ್ರೀ ಕೆ. ಎಚ್. ಶ್ರೀನಿವಾಸ.—ನನ್ನ ಬಹಳ ಪ್ರಾಮುಖ್ಯವಾದ ಪ್ರಶ್ನೆಗೆ ಉತ್ತರ ಬರಲಿಲ್ಲ. ಶರಾವತಿ ಪ್ರಾಜೆಕ್ಟಿನಲ್ಲಿ ಜಮೀನು ಕಳೆದುಕೊಂಡವರ ಪುನರ್ ವಸತಿ ಬಗ್ಗೆ ಸುಮಾರು 9 ಸಾವಿರ ಎಕರೆಗಳಷ್ಟು ಅರಣ್ಯಶಾಖೆಯ ಜಮೀನನ್ನು ರಿಲೀಜ್ ಮಾಡಬೇಕೆಂದು ಆರ್ಡರ್ ಮಾಡಿದ್ದರು. ಅದರೆ ಅದರಲ್ಲಿ ಹ್ಯಾಂಡ್ ಓವರ್ ಮಾಡಿರುವುದು 4—4½ ಸಾವಿರ ಎಕರೆಗಳು. ಇನ್ನು ಉಳಿದುದನ್ನು ಹ್ಯಾಂಡ್ ಓವರ್ ಮಾಡಲಿಲ್ಲ. ಅದನ್ನು ಹ್ಯಾಂಡ್ ಓವರ್ ಮಾಡುತ್ತಾರೆಂಬ ನಿರೀಕ್ಷೆ ಮೇಲೆ ಅನೇಕ ಜನರಿಗೆ ಪುನರ್ವಸತಿ ಮಾಡಿದ್ದಾರೆ. ಉಳಿದ ಸೌಕರ್ಯಗಳನ್ನು ಕೊಟ್ಟಿದ್ದಾರೆ. ಆದರೆ ಅಂತಹವರ ಮೇಲೆ ಅರಣ್ಯ ಶಾಖೆಯ ಅಧಿಕಾರಿಗಳು ಎವಿಕ್ಷನ್ ಪ್ರೊಸೀಡಿಂಗ್ ಮಾಡುತ್ತಿದ್ದಾರೆಂಬುದಾಗಿ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಹಿಂದೆ ಅರಣ್ಯ ಶಾಖೆಯ ಸಚಿವರು ಇದರ ಬಗ್ಗೆ ಭರವಸೆಯನ್ನೂ ಸಹ ಕೊಟ್ಟಿದ್ದರು. ಆದರೆ ಈಗಲೂ ಹಾಗೆಯೇ ನಡೆಯುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಆದರ ಬಗ್ಗೆ ಈಗಲಾದರೂ ಒಂದು ಸರಿಯಾದಂಥ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಅರಣ್ಯ ಶಾಖೆಯವರು ರಿಹ್ಯಾಬಿಲಿಟೇಟ್ ಆದಂಥ ಜನರಿಗೆ ತೊಂದರೆ ಕೊಡುತ್ತಿದ್ದಾರೆಂದು ಹೇಳಿದ್ದಾರೆ. ಬಹುಶಃ ನಾನು ತಿಳಿದುಕೊಂಡಿರುವಹಾಗೆ ಮಾನ್ಯ ಸದಸ್ಯರು ಹಿಂದೆ ಒಂದು ಸಾರಿ ಅರಣ್ಯ ಶಾಖೆಯ ಸಚಿವರಲ್ಲಿ ಈ ಪ್ರಶ್ನೆ ಬಗ್ಗೆ ಪ್ರಸ್ತಾಪ ಮಾಡಿದ್ದರು. ಈಗ ಏನಾದರೂ ಎಕ್ಸ್‌ಪ್ರೊಪ್ರಿಯೇಟೆಡ್ ರೈಯತ್ತ್‌ಗೆ ರಿಲೀಜ್ ಆದ ಫಾರೆಸ್ಟ್ ಲ್ಯಾಂಡ್ಸ್ ನಂಬಂಧದಲ್ಲಿ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿದ್ದಾರೆಂದು ತಿಳಿದರೆ, ಬಹುಶಃ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಜಮೀನು ಮುಳುಗಡೆಯಾಗಿರತಕ್ಕ ಜನಗಳಿಗೆ ಕೊಡಬೇಕೆಂದು ಅರಣ್ಯ ಶಾಖೆಯಿಂದ ಜಮೀನನ್ನು ರಿಲೀಜ್ ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಏನಾದರೂ ತೊಂದರೆ ಇದ್ದರೆ ಅದನ್ನು ಸರಿಪಡಿಸುತ್ತೇವೆಂದು ಹೇಳುತ್ತೀರಿ. ಈಗ 10 ಎಕರೆ ಕೊಡಬೇಕೆಂದು ಕಾನೂನು ಇರುವಾಗ ನೀವು ಇನ್ನೂ ಕಡಿಮೆ ಕೊಡುತ್ತಿದ್ದೀರಿ. ಒಂದುವೇಳೆ ಅವರು ಬೇರೆ ಜಮೀನು ಸಾಗುವಳಿ ಮಾಡಿದ್ದರೆ ಅಂತಹ ಸಂದರ್ಭದಲ್ಲಿ ಆ ಜಮೀನನ್ನು ಸಹ ಅವರಿಗೆ ಮಂಜೂರು ಮಾಡಿಸಿ ಕೊಡುತ್ತೀರಾ ? ಅವರಿಗೆ ನೀರಾವರಿಗೆ ಬೇಕಾದಷ್ಟು ನೀರು ಇಲ್ಲ. ಆದುದರಿಂದ ನೀರಾವರಿ ಗೋಸ್ಕರ ಮತ್ತೆ ಅರಣ್ಯ ಇಲಾಖೆಯಿಂದ ರಿಲೀಜ್ ಆಗದೇ ಇರುವ ಜಮೀನನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಎಕ್ಸ್‌ಪ್ರೊಪ್ರಿಯೇಚೆಡ್ ರೈಯಟ್ಸ್‌ಗೆ ಫಾರೆಸ್ಟ್ ಲ್ಯಾಂಡ್‌ನಲ್ಲಿ ನೀರಾವರಿ ಬಗ್ಗೆ ಏನಾದರೂ ನ್ಯೂನತೆಗಳಿದ್ದರೆ ಅವನ್ನು ಸರಿಪಡಿಸುತ್ತೇವೆ. ಅದರೆ ಇನ್ನು ಕೆಲವು ಕಡೆಗಳಲ್ಲಿ ಅನ್‌ಅಥರೈಸ್ಡ್ ಆಗಿ ಅರಣ್ಯ ಪ್ರದೇಶವನ್ನು ಎನ್‌ಕ್ರೋಚ್ ಮಾಡಿ ಸಾಗುವಳಿ ಮಾಡಿದ್ದರೆ, ಅದರ ಬಗ್ಗೆ ಈಗ ಏನೂ ಆಶ್ವಾಸನೆಯನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಈ ಪ್ರಶ್ನೆಗೆ ಸಂಬಂಧವಾಗಿ ಕೊಟ್ಟಿರುವ ತಃಖ್ತೆಯಲ್ಲಿ 20 ಕಾಲೋನಿಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಭದ್ರಾವತಿಯಲ್ಲಿ ಅಶೋಕನಗರವೆಂಬ ನ್ಯಳದಲ್ಲಿ ಫಾರೆಸ್ಟ್ ಕ್ಲೀಯರ್ ಮಾಡಿ ಸಬ್‌ಮರ್ಜ್ಡ್ ಪೀಪಲ್‌ಗೆ ಜಮೀನು ಕೊಟ್ಟಿದ್ದೀರಿ. ಆದರೆ ಆ ಜಮೀನು ಗಳನ್ನು ಅಲ್ಲಿನ ಶ್ರೀಮಂತರು ಆ ಸಬ್‌ಮರ್ಜ್ಡ್ ಪೀಪಲ್‌ನಿಂದ ಖರೀದಿಗೆ ತೆಗೆದುಕೊಂಡಿದ್ದಾರೆ. ಅಂತಹವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ.— ಕೆಲವರು ಎಕ್ಸ್‌ಪ್ರೊಪ್ರಿಯೇಚೆಡ್ ರೈಯಟ್ಸ್ ಅವರ ಜಮೀನು ಗಳನ್ನು ಸಾಹುಕಾರರಿಗೆ ಮಾರಾಟ ಮಾಡುತ್ತಿದ್ದಾರೆಂದು ಹೇಳಿದ್ದಾರೆ. So for as I know, we cannot plase any limitation that they should not sell the dry lands.

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿ ದ್ದಾಗ ಅದು ರಾಷ್ಟ್ರೀಯ ಯೋಜನೆಯೆಂದು ಪರಿಗಣಿಸಿ ಆ ರೈತರಿಗೆ ತೀವ್ರವಾಗಿ ಮನೆಗಳನ್ನು ಕಲ್ಪಿಸಿಕೊಡಬೇಕು, ಅದಕ್ಕೆ ಎಷ್ಟೇ ಖರ್ಚಾದರೂ ಚಿಂತೆಯಿಲ್ಲ ಎಂದು ಹೇಳಿರುವಾಗ ಅಲ್ಲಿ ಅವ್ಯವಸ್ಥೆ ಯಾಗಿರುವುದನ್ನು ವ್ಯವಸ್ಥಿತವಾಗಿ ಮಾಡುವುದಕ್ಕೆ ತಾವು ತೀವ್ರವಾಗಿ ಗಮನಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಅದನ್ನು ವ್ಯವಸ್ಥಿತವಾಗಿ ಮಾಡಬೇಕೆಂದು ಹೇಳಿ ಅಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಾನು ನಿನ್ನೆ ದಿವಸ ಕೂಡ ಹೇಳಿದೆ. ಅವರಿಗಾಗಿ ಕಾಲೋನಿಗಳನ್ನು ಮಾಡಿದ್ದೇವೆ, ಹೆಚ್ಚಿಗೆ ಅಮಿನಿಟೀಸ್ ಕೊಡುತ್ತಿದ್ದೇವೆ, ಆದರೂ ಸಹ ಕೆಲವರು ಕಾಲೋನಿಗೆ ಹೋಗುವುದಿಲ್ಲ. ಈ ಬಗ್ಗೆ ನಾವು ಒಂದು ಪ್ರಿನ್ಸಿಪಲ್ ಇಟ್ಟುಕೊಂಡಿದ್ದೇವೆ. ಅದರಂತೆ 20 ಫ್ಯಾಮಿಲಿಗಳು ಹೊಸ ಕಾಲೋನಿಗೆ ಹೋಗಬೇಕು. ಆದರೆ ಈಗ ಇದರಲ್ಲಿ ಏನಾಗಿದೆ ಎಂದರೆ ಹೊಸ ಕಾಲೋನಿಗಳನ್ನು ಕಟ್ಟಿಸಿ ಅವರಿಗೆ ಮನೆ ಇತ್ಯಾದಿ ಅಮಿನಿಟೀಸ್‌ಗಳನ್ನೆಲ್ಲಾ ಕೊಟ್ಟು ನಾವು ಎಷ್ಟೇ ಆಸಕ್ತಿಯನ್ನು ವಹಿಸಿದರೂ ಕೂಡ ಅಲ್ಲಿಗೆ ರೈತರು ಹೋಗುತ್ತಿಲ್ಲ.

ಶ್ರೀ ಎ. ಆರ್. ಬದರಿನಾರಾಯಣ್.—ಈಗ ಸುಮಾರು 7–8 ವರ್ಷಗಳಾದರೂ ಕೂಡ ಶರಾವತಿ ಯೋಜನೆಯಲ್ಲಿ ಜಮೀನು ಮುಳುಗಡೆಯಾದ ರೈತರಿಗೆ ಕಾಡಿನಲ್ಲಿ ಜಮೀನು ರಿಲೀಜ್ ಆಗದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ, ಇದನ್ನು ತಾವು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಅಂಥಾ ನಿದರ್ಶನವನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯೂ ನಾನು ಅದನ್ನು ಸರಿಪಡಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ.—ಪುನರ್ ವಸತಿಯ ಬಗ್ಗೆ ಇರತಕ್ಕ ಎಷ್ಟು ಎಸ್ಟಿಮೇಟುಗಳು ಪೆಂಡಿಂಗ್‌ನಲ್ಲಿವೆ, ಅವುಗಳನ್ನು ಯಾವಾಗ ಮಂಜೂರು ಮಾಡುತ್ತೀರಾ, ಮತ್ತು ಶರಾವತಿ ಯೋಜನೆಯಲ್ಲಿ ಜಮೀನು ಮುಳುಗಡೆಯಾದ ರೈತರು ಜಮೀನಿಗಾಗಿ ಅರ್ಜಿ ಹಾಕಿದಾಗ ಜಮೀನು ಮಂಜೂರು ಮಾಡಿರುವ ಬಗ್ಗೆ ಡಿಸ್‌ಕ್ರಿಮಿನೇಷನ್ ತೋರಿಸಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಸ್ಯಾಮಿ ರೀಹ್ಯಾಬಿಲಿಟೇಷನ್ ಗೋಸ್ಕರ 54 ಲಕ್ಷ ರೂಪಾಯಿ ಗಳನ್ನು ಒದಗಿಸಿ ಈಗಾಗಲೇ ಅದಕ್ಕೆ 36 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಮಾನ್ಯ

ಸದಸ್ಯರಿಗೆ ಗೊತ್ತಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಉಳಿದಿರುವ 18 ಲಕ್ಷ ರೂಪಾಯಿಗಳನ್ನು ಈಗ ಖರ್ಚು ಮಾಡುವುದಕ್ಕೋಸ್ಕರ ಈಗಾಗಲೇ 26 ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಈ 26 ಕೆಲಸಕಾರ್ಯಗಳಲ್ಲಿ ಹೊಸನಗರ ತಾಲ್ಲೂಕಿನಲ್ಲಿ 12 ಕೆಲಸ ಕಾರ್ಯಗಳನ್ನೂ, ಸಾಗರ ತಾಲ್ಲೂಕಿನಲ್ಲಿ 8 ಕೆಲಸಕಾರ್ಯಗಳನ್ನೂ ಸೊರಬದಲ್ಲಿ 1 ಕೆಲಸವನ್ನೂ, ಷಿಕಾರಿಪುರದಲ್ಲಿ 3 ಕೆಲಸಕಾರ್ಯಗಳನ್ನೂ, ಶಿವಮೊಗ್ಗದಲ್ಲಿ ಒಂದು ಕೆಲಸವನ್ನೂ, ಭದ್ರಾವತಿಯಲ್ಲಿ ಒಂದು ಕೆಲಸವನ್ನೂ ಹೀಗೆ ಒಟ್ಟಿಗೆ 26 ಕೆಲಸಕಾರ್ಯಗಳನ್ನು 11 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತು ಈಗ ಉಳಿದಿರತಕ್ಕ 7 ಲಕ್ಷ ರೂಪಾಯಿಗಳ ಜೊತೆಗೆ ಇನ್ನೂ 4 ಲಕ್ಷ ರೂಪಾಯಿಗಳು ಬೇಕು ಎಂದು ಕೇಳಿದ್ದಾರೆ. 4 ಲಕ್ಷ ರೂಪಾಯಿಗಳ ಎಸ್ಟಿಮೇಟನ್ನು ಸರ್ಕಾರದ ಮಂಜೂರಾತಿಗಾಗಿ ಕಳುಹಿಸಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕಾಲೋನಿಗಳಲ್ಲಿ 5ಕ್ಕಿಂತ ಹೆಚ್ಚು ಕುಟುಂಬಗಳು ನೆಲೆಸಿದರೆ ಅವುಗಳಿಗೆ ಕೆಲವೊಂದು ಫೆಸಿಲಿಟೀಸ್ ಕೊಡಬೇಕೆಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ತೀರ್ಮಾನವಾಗಿದೆ. ಮುಳಗಡೆ ಸಮಿತಿಯವರು 22 ಎಸ್ಟಿಮೇಟುಗಳನ್ನು ಶಿಫಾರಸ್ಸು ಮಾಡಿ, ಡೆಪುಟಿ ಕಮೀಷನರು ಶಿಫಾರಸ್ಸು ಮಾಡಿ ಚೀಫ್ ಇಂಜಿನಿಯರ್ ಕೌಂಟರ್ ಸಿಗ್ನೇಚರಿಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಚೀಫ್ ಇಂಜಿನಿಯರು ಕೌಂಟರ್ ಸಿಗ್ನೇಚರ್ ಮಾಡದೆ ಅವರು ಅದನ್ನು ಉನ್ನತ ಸಮಿತಿಯವರ ಮುಂದೆ ಇಡುತ್ತಾರೆಂದು ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕಾಗದ ಬರೆದಿದ್ದಾರೆ. ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ಪರಮೇಶ್ವರಪ್ಪ. —ನಾನು ಮೊದಲೇ ಹೇಳಿದ್ದೇನೆ. ನಾವು ಕೆಲವು ಪ್ರಿನ್ಸಿಪಲ್ ಗಳನ್ನು ಇಟ್ಟುಕೊಂಡಿದ್ದೇವೆ. ಅದರ ಪ್ರಕಾರ 20 ಫ್ಯಾಮಿಲಿಗಳು ಕಾಲೋನಿಗೆ ಹೋದರೆ ಅವರಿಗೆ ಎಲ್ಲಾ ಫೆಸಿಲಿಟೀಸ್‌ಗಳನ್ನೂ ಒದಗಿಸಿಕೊಡುತ್ತೇವೆ. 5-6 ಫ್ಯಾಮಿಲಿಗಳಿಗೆ ಒಂದು ಕಾಲೋನಿ ಮಾಡುವುದಕ್ಕೆ ಆಗುವುದಿಲ್ಲ. ನನಗೆ ಆ ತೀರ್ಮಾನದ ಬಗ್ಗೆ ಮಾಹಿತಿ ಇಲ್ಲ. ತೀರ್ಮಾನವಾಗಿದ್ದರೆ ಅದನ್ನು ವಿಚಾರ ಮಾಡಬೇಕಾಗುತ್ತದೆ.

Preparation of a Scheme for the Development of Malnad area.

296. Sri B. BHASKAR SHETTY (Kaup).—

Will the Minister for Finance, Planning and Youth Welfare be pleased to state:—

(*a*) whether they would prepare a scheme for the devolopment of Malnad area ;

(*b*) if so, the salient features of the said scheme ;

(*c*) the amount estimated to be spent for the said scheme and the sources from which they would provide the said amount :

(*d*) the areas of the State that would come under this scheme ?

Sri RAMAKRISHNA HEGDE (Minister for Finance, Planning and Youth Welfare).—

(*a*) This is under the active consideration of Government.

(*b*) Priority will have to be given to forests, minor irrigation, agriculture, communication and rural industries in the scheme as per the general opinion revealed by the members of Malnad Study Team, deputed by Central Government, in the meeting held at Delhi on 15th January 1969.